**ಸಿ.ಸಿ.ನಂ.: 1566/2022**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **17–03–2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ. ವಾಯ್.ಆರ್.ಎಮ್. ವಕೀಲರಿಂದ</u>**

1. ಈ ಪ್ರಕರಣದಲ್ಲಿ ಯಾವುದೇ ಸಾಲದ ಅರ್ಜಿಯನ್ನು ನೀಡಲಿಲ್ಲ ಎಂದರೆ ಸರಿಯಲ್ಲ ಹಾಗೂ ಈ ಪ್ರಕರಣದಲ್ಲಿ ಯಾವುದೇ ಸಾಲ ಮಂಜೂರು ಆಗಲಿಲ್ಲ ಎಂದರೆ ಸರಿಯಲ್ಲ. ಆರೋಪಿತಳು ನಿಪಿ 8 ರಿಂದ 10 ನ್ನು ಬರೆದುಕೊಡಲಿಲ್ಲ ಎಂದರೆ ಸರಿಯಲ್ಲ. ಆರೋಪಿತಳಿಗೆ ಸಾಲ ಕಟ್ ಬಾಕಿ ಯಾದ ಕುರಿತಾಗಿ ಬ್ಯಾಂಕಿನಿಂದ ನೊಟೀಸನ್ನು ನೀಡಿರುತ್ತೇವೆ ಹಾಗೂ ನಾವು ನಮ್ಮ ವಕೀಲರ ಮುಲಕವೂ ನೊಟೀಸನ್ನು ನೀಡಿರುತ್ತೇವೆ. ನಾವು ಬ್ಯಾಂಕಿನಿಂದ ನೀಡಿದ ನೋಟೀಸನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಾವು ಆರೋಪಿತಳ ಸಾಲವು ಕಟ್ ಬಾಕಿಯಾದ ಕುರಿತಾಗಿ ಯಾವುದೇ ನೊಟೀಸನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾವು ಸದ್ರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ನಿಪಿ2 ನ್ನು ಆರೋಪಿತಳು ನಮ್ಮ ಫಿರ್ಯಾದಿ ಸಂಸ್ಥೆಗೆ ಬಂದು ನೀಡಿರುತ್ತಾಳೆ. ನಿಪಿ2 ರ ಬರವಣಿಗೆಯ ಶಾಹಿ ಹಾಗೂ ಸಹಿ ಇರುವ ಸವಿತಾ ಗಣಪತಿ ತನಮಡಗಿ ಎಂಬಲ್ಲಿ ಬರೆದಿರುವ ಸಹಿಯ ಶಾಹಿಯು ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿ. ನಿಪಿ2 ರ ಬರವಣಿಗೆಯನ್ನು ಇಂಗ್ಲೀಷ ಜ್ಞಾನ ಇರುವವರು ಬರೆದಿರುತ್ತಾರೆ ಎಂದರೆ ಸರಿ. ನಿಪಿ2 ರ ಬರವಣಿಗೆಯನ್ನು ನಮ್ಮ ಸಿಬ್ಬಂದಿಯವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತಳು ನಿಪಿ2 ನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಬರವಣಿಗಯನ್ನು ನಾವೇ ಮಾಡಿಕೊಂಡು ಈ ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿಸಿಕೊಂಡಿದ್ದೇವೆ

ಎಂದರೆ ಸರಿಯಲ್ಲ. ಆರೋಪಿತಳು ನಮಗೆ ಯಾವುದೇ ಹಣವನ್ನು ಕಾನೂನುಬದ್ದವಾಗಿ ಪಾವತಿ ಮಾಡಲು ಬಾಧ್ಯಸ್ಥಳಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಸಹಿಯನ್ನು ನಾವೇ ಹಾಕಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಸೃಷ್ಟಿಸಿದ ಸುಳ್ಳು ಪ್ರಕರಣದ ಪುರಾವೆಗಾಗಿ ನಿಪಿ2 ರ ಮೇಲಿನ ಮೊತ್ತವನ್ನು ನಾವೇ ಬರೆದುಕೊಂಡು ಆರೋಪಿತಳ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ನಮ್ಮ ಫಿರ್ಯಾದಿಯಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

3. ಆರೋಪಿತಳು ನಮಗೆ ನಿಪಿ2 ನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಜರು ಪಡಿಸಿದ ಎಲ್ಲಾ ದಾಖಲಾತಿಗಳನ್ನು ನಾವೇ ಸೃಷ್ಟಿಸಿಕೊಂಡು ನಾವೇ ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತಳು ನಮಗೆ ಯಾವುದೇ ದಾಖಲಾತಿಯನ್ನು ಬರೆದುಕೊಡಲಿಲ್ಲ ಎಂದರೆ ಸರಿಯಲ್ಲ. ಆರೋಪಿತಳಿಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ